# ಪ್ಯಾರಸಿಟಮಾಲ್ ಮಕ್ಕಳಿಗೆ ಸುರಕ್ಷಿತವೇ?

**ಪ್ಯಾರಸಿಟಮಾಲ್ ಔಷಧವು ಸಾಮಾನ್ಯವಾಗಿ ಯಾವುದೇ ಗಂಭೀರ ಸ್ವರೂಪದ ಅಡ್ಡಪರಿಣಾಮವನ್ನು ಉಂಟುಮಾಡುವುದಿಲ್ಲ. ಅಪರೂಪಕ್ಕೊಮ್ಮೆ ಚರ್ಮದ ಮೇಲೆ ದದ್ದುಗಳು ಕಾಣಿಸಿಕೊಳ್ಳಬಹುದು. ಆದರೆ ಮಕ್ಕಳಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಪ್ರಮಾಣದ ಸೇವನೆ (ಓವರ್ ಡೋಸ್) ಅಪಾಯಕಾರಿ.**

■ **ಡಾ. ಕೆ.ಬಿ. ರಂಗಸ್ವಾಮಿ**

ಇತ್ತೀಚೆಗೆ ಭೇಟಿಯಾಗಿದ್ದ ಮಿತ್ರರೊಬ್ಬರು 'ಸರ್, ನನ್ನ ಸ್ನೇಹಿತರೊಬ್ಬರ ಏಳು ವರ್ಷದ ಮಗು, 650 ಮಿಲಿ ಗ್ರಾಂನ ಎರಡು ಪ್ಯಾರಸಿಟಮಾಲ್ ಮಾತ್ರೆಗಳನ್ನು ಸೇವಿಸಿದ ನಂತರ ಅಸ್ವಸ್ಥವಾಗಿ ಸಾವನ್ನಪ್ಪಿತು. ಹೀಗಾಗಲು ಸಾಧ್ಯವೇ?' ಎಂದು ಪ್ರಶ್ನಿಸಿದರು. 'ಖಂಡಿತ ಸಾಧ್ಯವಿದೆ' ಎಂದು ಹೇಳಿದ ನಾನು, ಮಕ್ಕಳಲ್ಲಿ ಪ್ಯಾರಸಿಟಮಾಲ್ ಔಷಧದ ಬಳಕೆಯ ಸಾಧಕ–ಬಾಧಕಗಳ ಕುರಿತು ಅವರಿಗೆ ಸರಳವಾಗಿ ತಿಳಿಸಿಕೊಟ್ಟೆ.

## ಏನಿದು ಪ್ಯಾರಸಿಟಮಾಲ್?

ಜ್ವರ ಮತ್ತು ನೋವಿನ ಶಮನಕ್ಕಾಗಿ ಜಗತ್ತಿನಾದ್ಯಂತ ವ್ಯಾಪಕವಾಗಿ ಬಳಸಲಾಗುತ್ತಿರುವ ಈ ಔಷಧವನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಅಸಿಟಮೈನೋಫೆನ್' ಎಂತಲೂ ಕರೆಯಲಾಗುತ್ತದೆ. ಹಲವಾರು ಕಂಪೆನಿಗಳ ವಿವಿಧ ಬ್ರ್ಯಾಂಡ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದ್ದು, ಕೊರೊನಾ ನಂತರದ ಕಾಲಘಟ್ಟದಲ್ಲಿ ಪ್ಯಾರಸಿಟಮಾಲ್‌ನ ಕೆಲವು ಬ್ರ್ಯಾಂಡ್ ಹೆಸರುಗಳು ಜನಸಾಮಾನ್ಯರ ನಾಲಗೆಯ ಮೇಲೆ ಲೀಲಾಜಾಲವಾಗಿ ಹರಿದಾಡತೊಡಗಿವೆ. ತಮ್ಮ ಪರಿಚಿತರಿಗೆ ಉಂಟಾಗಿರುವ ಜ್ವರ, ತಲೆನೋವು ಮುಂತಾದ ಸಮಸ್ಯೆಗಳಿಗೆ 'ಪ್ಯಾರಸಿಟಮಾಲ್ 650 ತೆಗೆದುಕೊಳ್ಳಿ' ಎಂದು ಉಚಿತ ಸಲಹೆ ನೀಡುವವರು ಸಾಮಾಜಿಕ ಜಾಲತಾಣಗಳಲ್ಲಿಯೂ ಕಾಣಸಿಗುತ್ತಾರೆ. ವೈದ್ಯರ ಶಿಫಾರಸ್ಸಿಲ್ಲದೆಯೂ ಈ ಔಷಧವನ್ನು ಖರೀದಿಸಿ, ತಾವಾಗಿಯೇ ಸೇವಿಸುವ ಪರಿಪಾಟವೂ ಈ ನಡುವೆ ಹೆಚ್ಚಾಗಿದೆ.

ಐಬುಪ್ರೊಫೆನ್, ಮೆಫಾನಮಿಕ್ ಆ್ಯಸಿಡ್, ನಿಮೆಸುಲೈಡ್ (ಇತ್ತೀಚಿನ ವರ್ಷಗಳಲ್ಲಿ ಈ ಔಷಧದ ಬಳಕೆಯನ್ನು ನಿರ್ಬಂಧಿಸಲಾಗಿದೆ) ಮುಂತಾದ ಹಲವಾರು ಜ್ವರ ನಿವಾರಕ ಮತ್ತು ನೋವು ನಿವಾರಕ ಔಷಧಗಳಿದ್ದರೂ ಸುರಕ್ಷತೆಯ ದೃಷ್ಟಿಯಲ್ಲಿ ಪ್ಯಾರಸಿಟಮಾಲ್ ಅಗ್ರಸ್ಥಾನ ಪಡೆಯುತ್ತದೆ. ಸಮರ್ಪಕ

